7. The karnataka Motor Vehicles Texation (Amendment) Bill, 1985".

further I have received the following message from the Chairman, Legislative Council.

"As required by rule 114 of the Rules of Procedure and Conduct of Bussiness in the Karnataka Legislative Council, I send herewith the following Bills which have been agreed to by the Legislative Coucial on 9th August, 1985 without amendments.

Name of the Bills

1 The Karnataka Civil Courts Laws (Amendment) Bill, 1985.

2. The Karnataka Legal Aid Board (Amendment) Bill. 1985,

3. The Karnataka Legislature Salaries, Pensions and Allowances (Second Amendment) Bill, 1985".

ಸಭೆಯ ಮುಂದಿಡಲಾದ ಕಾಗದ ಪತ್ರಗಳು

೧) ಶ್ರೀ ಆರ್. ಎಲ್. ಜಾಲಪ್ಪ(ಸಹಕಾರ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೫೯ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ೧೩೨ನೇ ಕಲಮಿನ ಮೇರೆಗೆ-೧೯೮೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ (ತಿದ್ದುಪಡಿ) ನಿಯಮಾವಳಿಗಳಿಗೆ ಸಂಬಂಧಿಸಿದಂತೆ ೧೯೮೫ನೇ ಆಗಸ್ಟ್, ೬ನೇ ದಿನಾಂಕದಂದು, ಹೊರಡಿಸಲಾದ ಸಿ.ಎಮ್.ಡಬ್ಲ್ಯೂ. ೬೮ ಸಿ.ಎಲ್.ಎಂ. ೮೫ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

೨) ಶ್ರೀ ಜೆ. ಎಚ್. ಪಟೇಲ್(ಭಾರೀ ಹಾಗೂ ಮಧ್ಯಮ ಕೈಗಾರಿಕಾ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ-೧೯೮೫-೮೪ನೇ ಸಾಲಿನ ಮೈಸೂರು ಕಾಸ್ಮೆಟಿಕ್ಸ್ ನಿಯಮಿತದ ಕಾರ್ಯನಿರ್ವಹಣೆಗಳ ಮೇಲಿನ ಸಂಕ್ಷಿಪ್ತ ಟಿಪ್ಪಣಿಯೊಂದಿಗೆ ೧೮ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

೩) ಶ್ರೀ ಎಂ. ರಘುಪತಿ(ಶಿಕ್ಷಣ ಮಂತ್ರಿ).—ಮಾನ್ಯ ಅಧ್ಯಕ್ಷರೇ, ೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೫(೨)ನೇ ಕಲಮಿನ ಮೇರೆಗೆ—

೧೯೮೫-೮೬ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಎಲ್ಲಾ ಕಾಗದಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

Privilege Notice by Sri S. Bangarapppa regarding Contradictory Statement by the Chief Minister and Public Works Minister.

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಮೇಲೆ ಮಾತನಾಡುತ್ತೀರೊ ? ಪ್ರಿವಿಲೇಜ್ ಮೋಷನ್ ಮೇಲೆ ಮಾತನಾಡುತ್ತೀರೋ? ಯಾವುದು ವಿಷಯ ಹೇಳಿ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಯಾವ ಒಂದು ಅಡ್ಜರ್ನ್‌ಮೆಂಟ ಮೋಷನ್‌ನ್ನು ಕಳಿಸಿಲ್ಲ. ಕೌಟ್ಪ್ರತಕ್ಕಂಥದ್ದು ಹಕ್ಕು ಚ್ಯುತಿ ನಿರ್ಣಯ ಅಥವಾ ಹಕ್ಕುಭಾಧ್ಯತಾ ನಿರ್ಣಯ. ನಿಯಮ ೧೯೦ರ ಪ್ರಕಾರ ನಾನು, ಮೊಯಿಲಿಯವರು ಮತ್ತು ಬೇರೆ ಮಾನ್ಯ ಸದಸ್ಯರು ನಾವು ಎಲ್ಲ ಸೇರಿಕೊಟ್ಟಿದ್ದೇವೆ. ವಿಷಯ ತಲುಗುಗಂಗಾ ನೀರಿನ ವಿಚಾರದಲ್ಲಿ. ಕರ್ನಾಟಕ ಮತ್ತು

ಆಂಧ್ರಪ್ರದೇಶ ಇದಕ್ಕೆ ಸಂಬಂಧಪಟ್ಟ ಹಾಗೆ ನಾವು ಹಲವಾರು ಭಾರಿ ಈ ಸದನದಲ್ಲಿ ಚರ್ಚೆಯನ್ನು ಕೂಡ ಮಾಡಿದ್ದೇವೆ. ಬಹಳ ವಿವರವಾಗಿ ಶ್ರೀಮಾನ್ ವೀರಪ್ಪ ಮೊಯಿಲಿಯವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ಸಂದರ್ಭದಲ್ಲಿ ಎರಡು ಹೇಳಿಕೆಗಳನ್ನು ಸರ್ಕಾರದ ಪರವಾಗಿ ನಾವು ಪಡೆದಿದ್ದೇವೆ ಇದೇ ಸದನದಲ್ಲಿ ನಾವುಗಳು ತಾ। ೨೬-೭-೮೫ ಮತ್ತು ೨-೮-೮೫, ಎರಡು ತಾರೀಖಿನಲ್ಲೂ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಮತ್ತು ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರಾದ ಶ್ರೀಮಾನ್ ದೇವೇಗೌಡರ ಹೇಳಿಕೆಯನ್ನೂ ಕೂಡ ನಾವು ಪಡೆದಿದ್ದೇವೆ. ಇಲ್ಲಿರತಕ್ಕಂಥ ಪ್ರಶ್ನೆ ತೆಲುಗು ಗಂಗಾ ಯೋಜನೆಯನ್ನು ಆಂಧ್ರ ಸರ್ಕಾರದವರೇ ಮಾಡಬೇಕು ಎನ್ನತಕ್ಕಂಥ ಉದ್ದೇಶ ಇತ್ತು. ಅವರು ಆ ಕೆಲಸವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆ ವಿಚಾರದಲ್ಲಿ ಈ ಸದನದಲ್ಲಿ ನಾವು ಪ್ರಶ್ನೆಯನ್ನು ಪ್ರಸ್ತಾಪ ಮಾಡಿದಾಗ ಸ್ಪಷ್ಟವಾದ ಒಂದು ನಿಲುವನ್ನು ಸರ್ಕಾರದ ಪರವಾಗಿ ಶ್ರೀ ಮಾನ್ ದೇವೇಗೌಡರು ಉತ್ತರಿಸುತ್ತಾ, ತೆಲುಗುಗಂಗಾ ಯೋಜನೆಯ ನಿರ್ಮಾಣ ನಡೆಯುತ್ತಿದೆ ಎನ್ನುವ ವಿಚಾರವನ್ನು ಹೇಳಿದರು. ನಮ್ಮ ಎಲ್ಲ ಶಕ್ತಿಗಳನ್ನು ಕೂಡ ಉಪಯೋಗ ಮಾಡಿ ನಮ್ಮ ರಾಜ್ಯದ ಹಿತವನ್ನು ಸಂಪೂರ್ಣವಾಗಿ ರಕ್ಷಣೆ ಮಾಡಿದ್ದೇವೆ. ಬಚಾವತ್ ಆಯೋಗದ, ಐತೀರ್ಪು ಏನು ಇದೆ, ಅದರ ವ್ಯಾಪ್ತಿ ಮತ್ತು ಅದರ ವಿವರಗಳನ್ನು ಹೇಳಲು ನಾನು ಹೋಗುವುದಿಲ್ಲ. ೨೦೦೦ ಎ.ಡಿ. ನಂತರ ಅದು ಜಾರಿಗೆ ಬರತಕ್ಕಂಥದ್ದು. ನಂತರ ಆ ವಿಚಾರ ೭೦ ಪರ್‌ಸೆಂಟ್ ಡಿಪೆಂಡಬಿಲಿಟಿ ನೀರಿನ ವಿವರಗಳನ್ನು ಆಯೋಗದಲ್ಲಿ ಕೊಟ್ಟಿದ್ದಾರೆ. ಈ ವಿಷಯವನ್ನು ಸಂಪೂರ್ಣವಾಗಿ ಪ್ರಸ್ತಾಪ ಮಾಡಿದಾಗ ಶ್ರೀ ಮಾನ್ ದೇವೇಗೌಡರ ಹೇಳಿಕೆಯನ್ನು ನಾವೆಲ್ಲರೂ ಸೇರಿ ಸ್ವಾಗತ ಮಾಡಿದೆವು. ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ರತಕ್ಕಂಥ ಹಕ್ಕು. ಬಚಾವತ್ ಆಯೋಗದ ಪ್ರಕಾರ ೭೦ ಟಿ.ಎಂ.ಸಿ. ನೀರು, ಈ ರೀತಿಯಾದ ಸಂಪೂರ್ಣ ಹಕ್ಕನ್ನು ಸದುಪಯೋಗಪಡಿಸಿಕೊಂಡು ಈ ವಿಚಾರದಲ್ಲಿ ನಾವು ಕಾರ್ಯೋನ್ಮುಖರಾಗಿದ್ದೇವೆ, ಅದರಂತೆ ಹೋಗುತ್ತಿದ್ದೇವೆ. ತೆಲುಗುಗಂಗಾ ಒಂದು ಯೋಜನೆಯನ್ನು ಆಂಧ್ರ ಸರ್ಕಾರದವರು ಸಂಪೂರ್ಣವಾಗಿ ಮಾಡಲೇಬೇಕು ಎನ್ನತಕ್ಕಂಥ ವಿಚಾರ ಇತ್ತು. ನಮ್ಮ ಕಡೆಯಿಂದ ಅಂದರೆ ಆ ಕಡೆ ನೀರು ಹೋಗುತ್ತಿದೆ, ನೀರು ಕೊಡಬಾರದು ಎನ್ನತಕ್ಕಂತ ವಿಚಾರ ಅಲ್ಲ. ನಮ್ಮ ಹಕ್ಕಿಗೆ ಧಕ್ಕೆ ಬರತಕ್ಕಂಥ ಸಂದರ್ಭದಲ್ಲಿ ಮಾಡತಕ್ಕಂಥ ಸಂಪೂರ್ಣ ಹೋರಾಟ ವಿರೋಧ ಪಕ್ಷದವರಿಗಿದೆ. ಶ್ರೀಮಾನ್ ದೇವೇಗೌಡರ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ಆ ಹೇಳಿಕೆಯು ತಾ। ೧೯-೭-೮೫ರ ಹೇಳಿಕೆಯಲ್ಲಿ ಶಾಸನಸಭೆಯಲ್ಲಿ ಈ ಸದನದ ಕಾರ್ಯಕಲಾಪ ಪ್ರಾರಂಭ ಮಾಡಿದ್ದು, ಆ ದಿವಸ ನಾವು ಕೂಡ ನಿರ್ಣಯವನ್ನು ಮಾಡಿದ್ದೆವು. ನಂತರ ಕೇಂದ್ರ ಸರ್ಕಾರದ ನೀರಾವರಿ ಸಚಿವರಿಗೆ ಪತ್ರ ಬರೆದಿದ್ದೇವೆಂದು ಈ ಪತ್ರದ ಕೊನೆಯ ಪ್ಯಾರಾದಲ್ಲಿ ಶ್ರೀಮಾನ್ ದೇವೇಗೌಡರು ಒತ್ತಿ ಹೇಳಿದ್ದಾರೆ.

ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಪತ್ರವೊಂದನ್ನು ಕೇಂದ್ರ ಸರ್ಕಾರದ ನೀರಾವರಿ ಸಚಿವರಾದ ಶ್ರೀಮಾನ್ ಶಂಕರಾನಂದ್‌ರವರಿಗೆ ಬರೆದಿರತಕ್ಕ ವಿಚಾರವನ್ನೂ ಕೂಡ ಪ್ರಸ್ತಾಪ ಮಾಡಿದರು. ಆ ರೀತಿ ಪ್ರಸ್ತಾಪ ಮಾಡುವಾಗ ಸದನಕ್ಕೆ ಒಂದು ತಿಳುವಳಿಕೆ ಬಂತು. ನಮಗೆ ಇರತಕ್ಕ ಹಕ್ಕು ಏನಿದೆ, ಆ ಹಕ್ಕಿನ ರಕ್ಷಣೆಯನ್ನು ಸಂಪೂರ್ಣವಾಗಿ ಆಗತಕ್ಕಂತಹ ವಿಚಾರದಲ್ಲಿ ಶ್ರೀಮಾನ್ ದೇವೇಗೌಡರ ಹೇಳಿಕೆ, ಅದಕ್ಕೆ ಮೂಲಭೂತವಾಗಿ ಅಂದರೆ ಅದಕ್ಕೆ ಪೂರಕವಾಗಿ ೧೯-೭-೮೫ರ ಸಚಿವ ಸಂಪುಟದ ಸಭೆಯಲ್ಲಿ ಆದಂತಹ ತೀರ್ಮಾನ ಇವೆಲ್ಲವನ್ನು ನೋಡಿದಾಗ ನಿಜವಾಗಿಯೂ ನಮ್ಮ ಹಕ್ಕಿನ ರಕ್ಷಣೆಯಾಗುತ್ತದೆ ಎಂಬ ಅಭಿಪ್ರಾಯವನ್ನು ನಾವು ಇಟ್ಟುಕೊಂಡಿದ್ದೆವು. ಹೆಚ್ಚುವರಿ ನೀರಿನ ಪ್ರಶ್ನೆ ಏನಿದೆ, ಅದನ್ನೇ ಆಂಧ್ರ ಸರ್ಕಾರ ಇಟ್ಟುಕೊಂಡಿದೆ. ತೆಲುಗು-ಗಂಗಾ ಯೋಜನೆಯಲ್ಲಿ ಹೆಚ್ಚುವರಿ ನೀರಿನ ಹೆಸರಿನಲ್ಲಿ ನಮ್ಮ ಹಕ್ಕಿಗೆ ಧಕ್ಕೆ ತರುತ್ತಾರೆ ಎಂಬುದಾಗಿ ಆ ಸಂದರ್ಭದಲ್ಲಿ ಹೇಳಿದಾಗ ಸರ್ಕಾರದ ಹೇಳಿಕೆಯನ್ನು ನೋಡಿದಮೇಲೆ ಎಲ್ಲರಿಗೂ ಸಮಾಧಾನವಾಯಿತು. ಅದಕ್ಕೆ ನಾವೆಲ್ಲರೂ ಮೆಚ್ಚುಗೆಯನ್ನು ಸೂಚಿಸಿದ್ದೇವೆ, ಸ್ವಾಗತಿಸಿದ್ದೇವೆ. ಬಹಳ ಸಂತೋಷ ಎನ್ನುವ ಅಭಿಪ್ರಾಯವನ್ನು ಕೂಡ ನಾವು ಹೇಳಿದ್ದೇವೆ. ಹೆಚ್ಚುವರಿ ನೀರಿನ ಪ್ರಶ್ನೆಯ ಬಗ್ಗೆ ವಿವರಗಳಿಗೆ ನಾವು ಈ ಸಂದರ್ಭದಲ್ಲಿ ಹೋಗದಿದ್ದರೂ, ಹೆಚ್ಚುವರಿ ನೀರು ಎಷ್ಟು? ಯಾಕಾಗಿ? ಎಂಬ ತೀರ್ಮಾನಕ್ಕೆ ಬರತಕ್ಕಂತಹದ್ದು ಈ ಸಂದರ್ಭದಲ್ಲಿಲ್ಲ. ತೆಲುಗು-ಗಂಗಾ ಯೋಜನೆ ಸಂಪೂರ್ಣವಾಗಿ ನಿರ್ಮಾಣವಾದಮೇಲೆ ನಮಗೆ ಹೆಚ್ಚುವರಿ ನೀರು ಎಷ್ಟು ಉಳಿಯುತ್ತದೆ ಎನ್ನುವ ಪ್ರಶ್ನೆ ಉಳಿಯುವುದಿಲ್ಲ ಎನ್ನತಕ್ಕಂತಹದ್ದು ನಮ್ಮ ಅಭಿಪ್ರಾಯ. ಬಚಾವತ್ ಆಯೋಗದವರ ಐತೀರ್ಪಿನ ಪ್ರಕಾರ ನಮಗೆ ದೊರಕಿರತಕ್ಕಂತಹ ನೀರಿನ ಪ್ರಮಾಣ ಎಷ್ಟಿದೆ, ಅದಕ್ಕೇ ಧಕ್ಕೆ ಬರುತ್ತದೆ ಎಂಬ ವಿಚಾರವನ್ನು ನಾವು ಸದನದಲ್ಲಿಟ್ಟಾಗ ಆ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವನ್ನೂ ತಳೆದದ್ದನ್ನು ನೋಡಿ ನಿಜವಾಗಿಯೂ ಕರ್ನಾಟಕ ರಾಜ್ಯದ ನೀರಿನ ಬಗ್ಗೆ ಇರತಕ್ಕ ಹಕ್ಕನ್ನು ರಕ್ಷಣೆ ಮಾಡುತ್ತಾರೆ ಎನ್ನುವ ಅಭಿಪ್ರಾಯ ಬಂತು. ಆದರೆ ನಂತರ ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಆ ಬಗ್ಗೆ ಹೊರಗಡೆಯಿಂದ ಕೊಟ್ಟಂತಹ

ಹೇಳಿಕೆಯನ್ನು ನೋಡಿದ ಮೇಲೆ ಆ ಒಂದು ಹೇಳಿಕೆ ೯ನೇ ತಾರೀಖು ಹಾಗೂ ೧೦ನೇ ತಾರೀಖು ಪತ್ರಿಕೆಗಳಲ್ಲಿ ವರದಿಯಾಗಿದೆ. ಅವರು ಹೈದರಾಬಾದ್‌ನಲ್ಲಿ ಆಗಸ್ಟ್ ೮ನೇ ತಾರೀಖು ಕೊಟ್ಟಂತಹ ಹೇಳಿಕೆ ೯ನೇ ತಾರೀಖು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಬಂತು. ಅದು 'Andhra Pradesh can use surplus Krishna waters; Chief Minister' ಅಂತ ಇದೆ. ಇಲ್ಲಿರತಕ್ಕ ಪ್ರಶ್ನೆ ಇಷ್ಟೆ. ಹೆಚ್ಚುವರಿ ನೀರನ್ನು ಉಪಯೋಗ ಮಾಡಿಕೊಳ್ಳಬಹುದೆಂಬ ಅಭಿಪ್ರಾಯ ನಮ್ಮ ಮುಖ್ಯಮಂತ್ರಿಗಳಿಂದಲೇ ಬಂದಮೇಲೆ, ಹೆಚ್ಚುವರಿ ನೀರು ಎಷ್ಟು? ಯಾವಾಗ ಎನ್ನುವ ಪ್ರಶ್ನೆಗಳು ಸಹಜವಾಗಿ ಎಲ್ಲರಿಗೂ ಬರುತ್ತವೆ. ಹೆಚ್ಚುವರಿ ನೀರಿನ ನೆಪದಲ್ಲೇ ಆಂಧ್ರ ಸರ್ಕಾರದವರು ತೆಲುಗು ಗಂಗಾ ಯೋಜನೆಯನ್ನು ಕೈಗೊಂಡಿರತಕ್ಕಂತಹದ್ದು ನಮಗೆಲ್ಲ ಗೊತ್ತಿರತಕ್ಕ ವಿಚಾರ. ಹೆಚ್ಚುವರಿ ನೀರನ್ನು ಉಪಯೋಗ ಮಾಡಬಹುದೆಂಬ ಮಾತನ್ನು ಈ ಸಂದರ್ಭದಲ್ಲಿ ನಾವೇ ಹೇಳತಕ್ಕಂತಹದ್ದಲ್ಲ. ಏಕೆಂದರೆ ಬಚಾವತ್ ಆಯೋಗದವರ ಐತೀರ್ಪು ಏನಿದೆ, ಆ ಅಗ್ರಿಮೆಂಟ್ ಪ್ರಕಾರ ನಮಗೆ ನೀರಿನ ಮೇಲೆ ಇರತಕ್ಕ ಹಕ್ಕಿಗೆ ಧಕ್ಕೆ ಬರುತ್ತದೆಂಬ ಸದುದ್ದೇಶದಿಂದ ಈ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದು. ಆ ಅಭಿಪ್ರಾಯಕ್ಕೆ ಪುನಃ ವಿರೋಧವಾಗಿ ಹೋಗತಕ್ಕಂತಹದ್ದು ಪತ್ರಿಕಾ ಹೇಳಿಕೆಯಿಂದ ಗೊತ್ತಾಗುತ್ತದೆ. ಈ ವಿಚಾರದಲ್ಲಿ ೯ ಮತ್ತು ೧೦ನೇ ತಾರೀಖಿನ ಪತ್ರಿಕೆಗಳಲ್ಲಿ ಬಂದಿರತಕ್ಕಂತಹದ್ದು ನಮ್ಮ ಮುಂದಿರತಕ್ಕ ಪ್ರಶ್ನೆ. ತೆಲುಗು ಗಂಗಾ ಯೋಜನೆಯ ವಿಚಾರದಲ್ಲಿ ಚರ್ಚೆಗೆ ತೆಗೆದುಕೊಂಡಾಗ ನಾವು ಏನು ಅಭಿಪ್ರಾಯಕ್ಕೆ ಬಂದೆವು? ನಮ್ಮ ರಾಜ್ಯಕ್ಕೆ ಬಂದಿರತಕ್ಕಂತಹ ನೀರನ್ನು ಉಪಯೋಗ ಮಾಡುವಂತಹದ್ದು ನಮಗೆ ಇರತಕ್ಕಂತಹ ಸಂಪೂರ್ಣವಾದ ಹಕ್ಕು. ಆ ಒಂದು ಹಕ್ಕಿನ ರಕ್ಷಣೆಯನ್ನು ಮಾಡತಕ್ಕ ಬಗ್ಗೆ ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಶ್ರೀಮಾನ್ ದೇವೇಗೌಡರು ಕೊಟ್ಟಿದ್ದಂತಹ ಹೇಳಿಕೆಯನ್ನು ನಾವೆಲ್ಲರೂ ಸಂತೋಷಪಟ್ಟು, ವಿಚಾರವನ್ನು ಅಲ್ಲಿಗೇ ನಿಲ್ಲಿಸಿದ್ದೇವೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಹೈದರಾಬಾದ್‌ಗೆ ಹೋಗಿದ್ದಾಗ ಅಲ್ಲಿಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಎನ್.ಟಿ. ರಾಮರಾವ್‌ರವರ ಜೊತೆಯಲ್ಲಿ ಮಾತುಕತೆ ಆದಮೇಲೆ ಅವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಆ ರೀತಿ ಕೇಳಿದಾಗ ಮುಂದೆ ನೋಡೋಣ ಎಂಬ ಧಾಟಿಯಲ್ಲಿ ಹೇಳಿದ್ದರೆ ಚೆನ್ನಾಗಿರುತ್ತಿತ್ತು. ಸುಮಾರಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ''ನೋ ನೋ'' ಆಂಧ್ರ ಪ್ರದೇಶದವರು ಹೆಚ್ಚುವರಿ ನೀರನ್ನು ಉಪಯೋಗ ಮಾಡುವುದಕ್ಕೆ ಅಬ್ಜಕ್ಷನ್ ಇಲ್ಲ ಎನ್ನುವ ಧಾಟಿಯಲ್ಲಿ ಹೇಳಿದ್ದಾರೆ. ಇದೇ ಮಾತನ್ನು ಹಿಂದೆ ಚರ್ಚೆ ನಡೆದಂತಹ ಕಾಲದಲ್ಲಿ ಸದನದಲ್ಲಿ ಹೇಳಿದ್ದರೆ ವಿಷಯ ಬೇರೆಯಾಗುತ್ತಿತ್ತು. ಹೆಚ್ಚುವರಿ ನೀರನ್ನು ಉಪಯೋಗ ಮಾಡಬಹುದೆಂಬ ವಾದವನ್ನು ಬೆಳೆಸುತ್ತಾ ಹೋಗಿದ್ದರೆ ಪರಿಣಾಮ ಬೇರೆಯಾಗುತ್ತಿತ್ತು. ಹೆಚ್ಚುವರಿ ನೀರಿನ ಹಂಚಿಕೆಯ ಬಗ್ಗೆ ಇನ್ನೂ ತೀರ್ಮಾನವಾಗದೇ ಇರತಕ್ಕಂತಹ ಸಂದರ್ಭ ಇದ್ದಾಗ ಆ ಒಂದು ಅಭಿಪ್ರಾಯವನ್ನು ಸದನದಲ್ಲೇ ಹೇಳಿದ್ದರೆ ಅದನ್ನು ನಾವೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತು. ತೆಲುಗು ಗಂಗಾ ನಿರ್ಮಾಣ ಕಾರ್ಯವನ್ನು ಸಂಪೂರ್ಣವಾಗಿ ತಡೆಯೊನ್ನೆಡ್ಡಿದ್ದರೆ ನಮ್ಮ ರಾಜ್ಯದ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೂ ಧಕ್ಕೆ ಬರುತ್ತದೆ ಎಂಬ ಅಭಿಪ್ರಾಯವನ್ನು ಇಷ್ಟು ನಾವು ಹೇಳಿದ ಮೇಲೆ ಸರ್ಕಾರ ಕೊಟ್ಟಂತಹ ಹೇಳಿಕೆಯನ್ನು ನಾವೆಲ್ಲರೂ ಒಪ್ಪಿದ್ದೇವೆ. ಹೆಚ್ಚುವರಿ ನೀರಿನ ಆಧಾರದ ಮೇಲೆ ಅವರು ಏನು ತೆಲುಗು ಗಂಗಾ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೋ, ಅದಕ್ಕೆ ಪೂರಕವಾಗಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚುವರಿ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ತಮ್ಮ ತಕರಾರು ಇಲ್ಲವೆಂಬ ಹೇಳಿಕೆ ಪುನಹ ಬಂದಮೇಲೆ ಹಿಂದೆ ೧೯-೭-೮೫ರಲ್ಲಿ ಆ ಬಗ್ಗೆ ತಕರಾರನ್ನು ತೆಗೆದು ಕೇಂದ್ರ ಸರ್ಕಾರದ ನೀರಾವರಿ ಸಚಿವರಾದ ಶ್ರೀಮಾನ್ ಶಂಕರಾನಂದ ರವರಿಗೆ ಪತ್ರ ಬರೆಯತಕ್ಕಂತಹ ಅವಶ್ಯಕತೆಯಾದರೂ ಏನಿತ್ತು ಎಂಬುದನ್ನೇ ಪ್ರಧಾನವಾಗಿ ಈ ಸಂದರ್ಭದಲ್ಲಿ ಕೇಳುತ್ತೇನೆ. ಇದು ನಮ್ಮ ಹಕ್ಕು. ಆಂಧ್ರ ಪ್ರದೇಶದವರು ಹೆಚ್ಚುವರಿ ನೀರನ್ನು ಉಪಯೋಗ ಮಾಡಬಹುದೆಂಬ ಹೇಳಿಕೆಯನ್ನು ನಮ್ಮ ಮುಖ್ಯಮಂತ್ರಿಗಳೇ ಕೊಟ್ಟಿರುವುದರಿಂದ, ಅವರು ನಿಜವಾಗಿಯೂ ಈ ಸದನಕ್ಕೆ ಕೊಟ್ಟಿರತಕ್ಕ ಮಾತಿಗೆ ಸಂಪೂರ್ಣ ವಿರುದ್ಧವಾಗಿ ಹೋಗಿರತಕ್ಕಂತಹ ಪ್ರಸಂಗವನ್ನು ಈ ಸಂದರ್ಭದಲ್ಲಿ ಕಂಡಿದ್ದೇವೆ. ಮುಖ್ಯಮಂತ್ರಿಗಳು ಮುಂದು ವರಿದು ಇನ್ನೊಂದು ಮಾತನ್ನೂ ಏನು ಹೇಳಿದ್ದಾರೆಂದರೆ ದೆರೀಸ್ ನೋ ಕಾಂಟ್ರವರ್ಸಿ ಅಂತ. ಅವರಿಗೂ ನಮಗೂ ಕಾಂಟ್ರವರ್ಸಿ ಇಲ್ಲ ಎಂಬ ಅಭಿಪ್ರಾಯ ನಿಮ್ಮದಾದರೆ, ಹೆಚ್ಚುವರಿ ನೀರಿನ ಪ್ರಶ್ನೆಯೇ ಬರುವುದಿಲ್ಲ ಎಂಬುದು ನಮ್ಮ ಅಭಿಪ್ರಾಯ. ಇದರಿಂದ ನಮ್ಮ ಸದನದ ಹಕ್ಕು ಚ್ಯುತಿಯಾಗಿದೆ. ಮೂರನೆಯದಾಗಿ ತೆಲುಗು ಗಂಗಾ ಯೋಜನೆ ನಿರ್ಮಾಣಕ್ಕೆ ಅವಕಾಶ ಕೊಟ್ಟರೆ, ಅದರಿಂದ ನಮ್ಮ ಪಾಲಿನ ನೀರು ಏನು ಇದೆ ಅದಕ್ಕೇ ದಕ್ಕೆ ಬರುತ್ತದೆ ಎಂಬುದಾಗಿ ಹೇಳಿದಾಗ All the things have occured in the press. There is no controversy between Andhra Pradesh and Karnataka. They can go

ahead with the Telugu Ganga project. There is no controversy ಎಂಬುದಾಗಿ ಸದನಕ್ಕೆ ಕೊಟ್ಟಿರತಕ್ಕ ಮಾತು. ಆ ಮಾತಿಗೆ ಸಂಪೂರ್ಣವಾಗಿ ವಿರೋಧವಾಗಿರತಕ್ಕ ಸಂದರ್ಭವನ್ನು ಕಂಡಿದ್ದೇವೆ. ಶ್ರೀಮಾನ್ ದೇವೇಗೌಡರು ಆ ದಿವಸ ಅದರ ಬಗ್ಗೆ ಬಹಳ ವಿವರವಾಗಿ ಹೇಳಿದರು. ಅದನ್ನು ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ಮುಖ್ಯಮಂತ್ರಿಗಳೂ ಕೂಡ ಅದಕ್ಕೆ ಬೆಂಬಲವಾಗಿ ಶ್ರೀಮಾನ್ ದೇವೇಗೌಡರು ಏನು ಹೇಳಿದ್ದಾರೆ. ಅದಕ್ಕೆ ನನ್ನ ಬೆಂಬಲ ಇದೆ ಎಂಬ ಮಾತನ್ನು ಹೇಳಿದ್ದಾರೆ. ಅದು ದಾಖಲಿಯಲ್ಲಿದೆ ತರಿಸಿ ನೋಡಿ. ಇಷ್ಟೆಲ್ಲಾ ಆದಮೇಲೂ ಪುನಹ ಹೈದರಾಬಾದ್‌ನಲ್ಲಿ ಹೆಚ್ಚು ಪರಿ ನೀರನ್ನು ಉಪಯೋಗ ಮಾಡಬಹುದು, ಕಾಂಟ್ರವರ್ಸಿ ಏನೂ ಇಲ್ಲ ಎಂಬುದಾಗಿ ಹೇಳಿರುವುದನ್ನು ನೋಡಿದರೆ ಇದರಲ್ಲಿ ಸ್ಪಷ್ಟವಾಗಿ ರಾಜಕೀಯ ಆಡಗಿದೆ ಎಂಬುದು ಎಲ್ಲರಿಗೂ ತಿಳಿಯುತ್ತದೆ. ಅವರವರ ವೈಯಕ್ತಿಕ ಸ್ನೇಹ ಸಂಬಂಧ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬರುವುದಾದರೆಹೇಗೆ? ಅವರ ವೈಯಕ್ತಿಕ ಸಂಬಂಧಕ್ಕೂ, ರಾಜ್ಯದ ಹಿತಕ್ಕೂ ಯಾವುದೇ ಸಂಬಂಧ ಇಲ್ಲ, ಎಂಬುದನ್ನಾದರೂ ಅವರು ಇಲ್ಲಿ ಸ್ಪಷ್ಟಪಡಿಸಬೇಕು. ಸದನದಲ್ಲಿ ಕೊಟ್ಟಿರತಕ್ಕಂತಹ ಹೇಳಿಕೆಗೆ ವಿರುದ್ಧವಾಗಿ ಹೇಳಿಕೆ ಬಂದಿರುವುದರಿಂದ, ಇದು ಸದನದ ಹಕ್ಕಿನ ಚ್ಯುತಿಯಾಗಿದೆ. ಮಾನ್ಯ ಸದಸ್ಯರುಗಳ ಹಕ್ಕಿಗೆ ಚ್ಯುತಿ ಬಂದಿದೆ. ಆ ಬಗ್ಗೆ ಚರ್ಚೆ ಮಾಡಲು ಅನುಮತಿಯನ್ನು ತಾವು ಕೊಡಬೇಕು, ಮತ್ತೆ ಇದನ್ನು ಯಾವ ರೀತಿ ತೆಗೆದುಕೊಳ್ಳಬೇಕೆಂಬುದರ ಬಗ್ಗೆಯೂ ತಾವು ಅನುಮತಿಯನ್ನು ಕೊಡಬೇಕೆಂಬ ವಿನಂತಿ ಮಾಡಿಕೊಂಡು ಬೇರೆ ವಿವರಗಳನ್ನು ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಪ್ಪನ್ನು ಕೇಳಿಕೊಳ್ಳುತ್ತೇನೆ.

೧-೦೦ ಪಿ.ಎಂ.

ಶ್ರೀ ಎಂ. ನಾರಾಯಣರಾವ್.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್ ಇದೆ. ನಿಯಮ ೧೯೩ರ ಪ್ರಕಾರ ಹೌಸ್ ಲೀವ್ ಕೊಟ್ಟ ಮೇಲೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು.—ಚರ್ಚೆ ಮಾಡುತ್ತಿಲ್ಲ. ಪ್ರೈಮಾಫೇಸಿ ಹೌದೋ ಅಲ್ಲವೋ ಎಂದು ಹೇಳುತ್ತಿದ್ದೇನೆ.

ಶ್ರೀ ಎಂ. ನಾರಾಯಣರಾವ್.—ಇದರ ಮೇಲೆ ಮಾತಾನಾಡುವುದಕ್ಕೆ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅನೇಕ ಗಂಟೆಗಳು ಆಗಬಹುದು. ಸಭಾಧ್ಯಕ್ಷರ ಮನವೊಲಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ಅದಕ್ಕೆ ಒಪ್ಪಿಗೆ ಕೊಡತಕ್ಕ.....

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಸಭಾಧ್ಯಕ್ಷರೇ, ಈ ವಿಚಾರದಲ್ಲಿ ನಾವು ಹೆಚ್ಚು ಪ್ರಸ್ತಾಪ ಮಾಡುವ ಅವಶ್ಯಕತೆ ಇಲ್ಲ. ಇದನ್ನು ವಿಸ್ತಾರವಾಗಿ ಹೇಳುತ್ತಿಲ್ಲ. ಇದು ಪ್ರಮುಖ ವಾದಂತಹ ಮತ್ತು ಸೂಕ್ಷ್ಮವಾದಂತಹ ವಿಚಾರ. ಆದೇ ರೀತಿ ನಮ್ಮ ಸನ್ಮಾನ್ಯ ಮುಖ್ಯ ಮಂತ್ರಿಗಳು ಎರಡನೇ ತಾರೀಖು ಹೇಳಿಕೆ ಕೊಟ್ಟಾಗ ೨೬ನೇ ತಾರೀಖು ನಮ್ಮ ನೀರಾವರಿ ಸಚಿವರು ಆ ಬಗ್ಗೆ ವಿವರ ಕೊಟ್ಟಮೇಲೆ ಈ ವಿಚಾರವನ್ನು ಮತ್ತೆ ಎತ್ತಲಿಲ್ಲ. ಇಬ್ಬರ ಉತ್ತರದಿಂದಲೂ ಅನೇಕ ಸಮಸ್ಯೆಗಳು ನಮ್ಮಲ್ಲಿ ಉದ್ಭವಾಗಿದ್ದವು. ಆದರೂ ಕೂಡಾ ಅದನ್ನು ಪ್ರಸ್ತಾಪ ಮಾಡಬಾರದು. ಇದು ಪರಸ್ಪರ ಅಂತರ ರಾಜ್ಯ ನೀರಿನ ವ್ಯಾಜ್ಯ ಆಂಧ್ರರಾಜ್ಯದ ನೀರಿನ ವ್ಯಾಜ್ಯವನ್ನು ಉದ್ಭವ ಮಾಡಬೇಕು ಎನ್ನುವ ಉದ್ದೇಶ ನಮಗಿರಲಿಲ್ಲ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಯಾವ ಉದ್ದೇಶದಿಂದ ಹೊರಟ್ಟಿದ್ದಾರೋ ಅದಕ್ಕೆ ಹೆಚ್ಚು ಪ್ರೋತ್ಸಾಹ ಕೊಡಬಾರದು ಎನ್ನುವುದೇ ನಮ್ಮ ಉದ್ದೇಶ. ನಿಜವಾಗಿಯೂ ಕರ್ನಾಟಕದ ಮಟ್ಟಿಗೆ It is not a controversy. ಈ ವಿವಾದವನ್ನು ಎಬ್ಬಿಸಿದ್ದು ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ತಮ್ಮ ಒಪ್ಪಿಗೆಗಾಗಿ ನಾವು ಪ್ರಸ್ತಾಪನೆ ಮಾಡುತ್ತಿದ್ದೇವೆ. ಇಷ್ಟಕ್ಕೆ ಮಾತ್ರ ಸೀಮಿತಗೊಳಿಸುತ್ತೇನೆ. ಇದರ ಬಗ್ಗೆ ಹೇಳಿಕೆ ಕೊಡುವಾಗ ಅಧಿಕಾರದಲ್ಲಿರತಕ್ಕವರು ಜಾಗರೂಕತೆಯಿಂದ ಇರಬೇಕು. ವೈಯಕ್ತಿಕವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಎರಡನೇ ತಾರೀಖಿನಲ್ಲಿ ಹೇಳಿಕೆಕೊಟ್ಟಿದ್ದರು. ನೀರಾವರಿ ಸಚಿವರು ಸಾಕಷ್ಟು ವಿಸ್ತಾರವಾಗಿ ಹೇಳಿದ್ದಾರೆ. ನಾವು ಅವತ್ತು ಒತ್ತಾಯ ಮಾಡಲಿಲ್ಲ. ಈ ವಿಷಯವನ್ನು ರಾಜಕೀಯವಾಗಿ ತೆಗೆದುಕೊಂಡಿದ್ದರೆ ಈ ದಿವಸವೇ ಕ್ಯಾಟೆಗರಿಕಲ್ ಸ್ಟೇಟ್‌ಮೆಂಟ್‌ಗಾಗಿ ನಿರೀಕ್ಷೆ ಮಾಡಬಹುದಾಗಿತ್ತು. ಅದರ ಬಗ್ಗೆ ಪ್ರಸ್ತುತ ಹೆಚ್ಚು ಚರ್ಚೆ ಮಾಡುವುದು ಬೇಡವೆಂದು ಸುಮ್ಮನಾದೆವು. ಹಿಂದೆ ಶ್ರೀಮಾನ್ ದೇವರಾಜ್ ಅರಸ್‌ರವರು ಇದ್ದಾಗ ನಮ್ಮ ನೀರಿನ ವ್ಯಾಜ್ಯ ಬಂದಾಗ ಒಂದು ಸಾಲಿಡಾರಿಟಿ ತೋರಿಸಿ

ದ್ದಾರೆ. ಈ ಬಗ್ಗೆ ನಾವು ಇನ್ನು ಸಾಲಿಡಾರಿಟಿ ತೋರಿಸುವುದಕ್ಕೆ ಯಾವಾಗಲೂ ಸಿದ್ಧರಿದ್ದೇವೆಂದು ಅದನ್ನು ಆ ದಿವಸವೇ ಹೇಳಿದ್ದೇವೆ ಈ ದಿವಸವು ಕೂಡ ನಾವು ಅದನ್ನೇ ಪುನರ್ ಉಚ್ಚಾರ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಇಂತಹ ವಿಚಾರ ಪ್ರಾತಿನಾಡುವಾಗ ನಮ್ಮ ನಾಯಕರು ಹಿಂದೆ ಮುಂದೆ ನೋಡಬಾರದು. ಇದನ್ನು ಪ್ರತಿಪಾದನೆ ಮಾಡುವಾಗ ನಮ್ಮ ಹಕ್ಕನ್ನು ಸಮರ್ಥನೆ ಮಾಡುವಾಗ ದುರ್ಬಲರಾಗಬಾರದು. ನಾವು ಇದುವರೆವಿಗೂ ಯಾವುದೇ ಪ್ರಶ್ನೆ ಎತ್ತಿರಲಿಲ್ಲ. ಆದರೆ ಈಗ ನಮ್ಮ ಮನಸ್ಸಿನಲ್ಲಿ ಸಂಶಯಗಳು ಬಂದಿವೆ. ಮದ್ರಾಸಿನ ಒಂದು ಸಮಾರಂಭದಲ್ಲಿ ತಾವು ಭಾಗ ವಹಿಸಿದ್ದೀರಿ. ಇಂದು ಅದನ್ನು ಪ್ರಸ್ತಾಪ ಮಾಡುವುದಕ್ಕೆ ನಾವು ಹೋಗುವುದಿಲ್ಲ. ಮೆರಿಟ್ ಆಫ್ ದಿ ಕೇಸ್ ಬಗ್ಗೆ ನಾವು ಪ್ರಸ್ತಾಪ ಮಾಡುವುದಿಲ್ಲ. ೧೯೫೫ರ ಜುಲೈ ೧೯ನೇ ತಾರೀಖು ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಯವರಿಗೆ ಏನು ಪತ್ರ ಬರೆದಿದ್ದಾರೆ ಅದರಲ್ಲಿ ಸ್ಪಷ್ಟವಾಗಿದೆ. ದೇರ್ ಈಸ್ ಎ ಕಾಟಗರಿಕಲ್ ಆಫರ್ ಆಫ್ ರೆಸೀಟೆನ್ಸ್ ಆಸ್ ಪಾರ್ ಅ್ಸ್ ದಿ ಇರೀಗೇಷನ್ ಪ್ರಾಜೆಕ್ಟ್ ಇಸ್ ಕನ್ಸರ್ನೆಡ್. ಸದನದಲ್ಲಿ ಒಂದಂತಹ ಹೇಳಿಕೆಗಳು ಹಾಗೂ ಸರ್ಕಾರದ ನಿಶ್ಚಿತ ವಾದಂತಹ ನಿರ್ಣಯ ಮತ್ತು ನಿರ್ಧಾರವನ್ನು ಈ ಸದನದಲ್ಲಿ ಹೇಳಿದ್ದೀರಿ. ಕ್ಯಾಬಿನೆಟ್‌ನಲ್ಲೂ ಕೂಡ ಇದರ ಬಗ್ಗೆ ಹೇಳಿದ್ದೀರಿ, ೧೯ನೇ ತಾರೀಖು ಪತ್ರ ಬರೆದು ಅದರಲ್ಲಿ ತೆಲಗು-ಗಂಗಾ ಯೋಜನೆಯ ಪೂರ್ಣ ವರದಿಯೆಂದು ತಿಳಿಸಿದ್ದೀರಿ. ಅದರ ಮೇಲೆ ಮತ್ತೆ ವಿವಾದ ಮಾಡುವುದು ಬೇಡಯೆಂದು ನಾವು ಸುಮ್ಮನಾಗಿದ್ದೆವು. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಹೈದರಾಬಾದಿಗೆ ಹೋಗಿ ಸನ್ಮಾನ್ಯ ಎನ್.ಟಿ.ಆರ್ ಅವರನ್ನು ಭೇಟಿ ಆದರು. ಅವರು ಹೊರಗಡೆ ಬಂದಕೂಡಲೆ ಪತ್ರಿಕೆಯಲ್ಲಿ ಒಂದು ಹೇಳಿಕೆ ಬಂತು. ಅದನ್ನು ಸೂಕ್ಷ್ಮವಾಗಿ ನೋಡಿದ್ದೇನೆ. ಸರ್‌ಪ್ಲಸ್ ವಾಟರ್ ವಿಚಾರದಲ್ಲಿ ಏನಾದರೂ ವಿವರಣೆ ಕೊಡಬಹುದು. ಪುನಃ ಪುನಃ ತೆಲುಗು-ಗಂಗಾ ಪ್ರಾಜೆಕ್ಟ್ ಬಗ್ಗೆ.....ಇಷ್ಟನ್ನು ತಾವು ಅಲ್ಲಿ ಹೇಳಿದ್ದಾರೆ ಅಲ್ಲಿ ಅದನ್ನು ಎತ್ತತಕ್ಕ ಪ್ರಶ್ನೆಯೇ ಇರಲಿಲ್ಲ. ತೆಲುಗು-ಗಂಗಾ ಯೋಜನೆ ಬಹಳ ಸಿಂಪಲ್‌ಆಗಿರುವ ವಿಚಾರ. ಡೆಲ್ಲಿಯಲ್ಲಿ ಕ್ಲಾರಿಫಿಕೇಷನ್ ಬರಬಹುದು. ಇದರ ಬಗ್ಗೆ ನನ್ನ ಅಭ್ಯಂತರವೇನು ಇಲ್ಲ. ಈ ಧಾಟಿಯಲ್ಲಿಯೇ ಡೆಲ್ಲಿಯ ಪತ್ರಿಕೆಗಳಲ್ಲೂ ಬಂದಿದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಒಂದು ಸ್ಪಷ್ಟವಾದ ಹೇಳಿಕೆ ಕೊಡಬೇಕು. ಇದು ಸದನದ ಹಕ್ಕು ಬಾಧ್ಯತೆಯ ಪ್ರಶ್ನೆ. ಏಕೆಂದರೆ ಸದನದಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ವೈಯಕ್ತಿಕವಾಗಿ ಸನ್ಮಾನ್ಯ ದೇವೇಗೌಡರು ಕೊಟ್ಟಂತಹ ಹೇಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಸರ್ಕಾರದ ಧೋರಣೆ ಏನು ಎಂಬುದನ್ನು ತೆಲುಗು-ಗಂಗಾ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ಈ ಸದನದ ವಿಷಯವಾಗಿದೆ. ಈ ಹೇಳಿಕೆ ಸರ್ಕಾರದ ಪರವಾಗಿ ಕೊಟ್ಟಂತಹ ಆಶ್ವಾಸನೆ. ನಮ್ಮ ಹಕ್ಕು ಏನೆಂದರೆ, ನಮ್ಮನ್ನು ರಕ್ಷಣೆ ಮಾಡತಕ್ಕಂತಹ ಆಶ್ವಾಸನೆಯನ್ನು ಕೊಟ್ಟಮೇಲೆ ಅದರ ವಿರುದ್ಧವಾದ ಹೇಳಿಕೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೈದರಾಬಾದ್ ಮತ್ತು ಡೆಲ್ಲಿಯಲ್ಲಿ ಕೊಟ್ಟಿರುವುದು ಪ್ರೈಮಾಫೇಸಿ ಹಕ್ಕುಬಾಧ್ಯತೆ ಪ್ರಶ್ನೆಯಾಗಿ ಕಾಣುತ್ತದೆ. ಈ ವಿಷಯ ಪತ್ರಿಕೆಗಳಲ್ಲೂ ಬಂದಿದೆ. ನಾವು ಎಲ್ಲಾ ಪತ್ರಿಕೆಗಳಲ್ಲೂ ಸೂಕ್ಷ್ಮವಾಗಿ ನೋಡಿದ್ದೇನೆ. ಸದನ ನಡೆಯುತ್ತಿರುವಾಗ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮಂತ್ರಿಗಳಾದ ದೇವೇಗೌಡರು ಸದನದಲ್ಲಿ ಆಶ್ವಾಸನೆ ಕೊಟ್ಟಮೇಲೆ ಕ್ಯಾಬಿನೆಟ್ ನಿರ್ಣಯ ಮಾಡಿರುವುದನ್ನು, ಅಲ್ಲಿ ಉಲ್ಲೇಖ ಮಾಡಿದ್ದಾರೆ. ೧೯-೭-೮೫ರ ನಡುವಳಿಕೆಗಳೂ ಕೂಡ ನನ್ನ ಹತ್ತಿರ ಇದೆ. ಇದರ ಬಗ್ಗೆ ವಿಸ್ತಾರವಾಗಿ ಮಾತಾನಾಡುವುದಕ್ಕೆ. ಹೋಗುವುದಿಲ್ಲ. ಒಂದು ವೇಳೆ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ದೇವೇಗೌಡರು ಕೊಟ್ಟಂತಹ ಹೇಳಿಕೆಗಳಿಗೆ ವಿರುದ್ಧವಾಗಿ ವ್ಯತಿರಿಕ್ತವಾದಂತಹ ಹೇಳಿಕೆಯನ್ನು ತೆಲುಗು-ಗಂಗಾ ಯೋಜನೆಯ ಬಗ್ಗೆ ನೀಡುವುದಾದರೆ ಈ ಸದನದಲ್ಲಿ ನೀಡಬೇಕಾಗುತ್ತದೆ. ಸದನ ನಡೆಯುತ್ತಿರುವಾಗ ಹೈದರಾಬಾದ್, ಡೆಲ್ಲಿಯಲ್ಲಿ ಹೇಳಿಕೆ ಕೊಟ್ಟು ಸದನದ ಹಕ್ಕನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡಿದ್ದೀರಿ. ತಾವು ಇಂದು ಕಾರ್ಯಕಲಾಪಗಳನ್ನು ಸಂಪೂರ್ಣವಾಗಿ ಅವಲೋಕನ ಮಾಡಬೇಕು. ತಾರೀಖು ೨೬-೭-೮೫ ಮತ್ತು ೨೯-೮-೮೫ ಈ ಎರಡು ತಾರೀಖುಗಳಲ್ಲೂ ಎರಡು ಹೇಳಿಕೆಗಳನ್ನು ಕೊಟ್ಟಿದ್ದೀರಿ. ಅವುಗಳನ್ನು ತಾವು ತರಿಸಿ ನೋಡಿದರೆ ಸ್ಪಷ್ಟವಾಗಿ ಸದನದ ಹಕ್ಕನ್ನು ಉಲ್ಲಂಘಿಸಲಾಗಿದೆಯೆಂಬುದು ಕಾಣುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ನಾನು ಸ್ಪಷ್ಟಪಡಿಸುವುದಕ್ಕೆ ಬಯಸುವುದೇನೆಂದರೆ, ಸಂಪೂರ್ಣವಾಗಿ ಸರ್ಕಾರದ ನಿಲುವಿನಲ್ಲಿ ಯಾವುದೇ ತರಹದ ವ್ಯತ್ಯಾಸ ಇಲ್ಲ. ಮೊದಲು ಯಾವ ನಿಲುವು ಇತ್ತು, ಇವತ್ತೂ ಅದೇ ನಿಲುವು ಇದೆ. ಯಾವ ನಿಲುವು ಎಂದರೆ, ಸಂಬಂಧಪಟ್ಟ ಮಂತ್ರಿಗಳಾದಂತಹ ಮಾನ್ಯ ದೇವೇಗೌಡರು ಇಲ್ಲಿ ಏನು ವಿವರಿಸಿದರೋ ಅದೇ ನಿಲುವು ಇವತ್ತಿಗೂ ಇದೆ. ಆದರೆ ಒಂದೊಂದು ಸಲ ಏನಾಗುತ್ತದೆಂದರೆ ಒಬ್ಬೊಬ್ಬರ

ಕಣ್ಣಿಗೆ ಒಂದೊಂದು ರೀತಿ ಕಾಣುತ್ತದೆ. ಈಗ ನೀವು ಹೇಳಬಹುದು ಈ ಬಾಟಲ್‌ನಲ್ಲಿ ಅರ್ಧ ನೀರು ಇದೆ ಎಂದು ಮತ್ತೊಬ್ಬರು ಅರ್ಧ ಇಲ್ಲ, ಖಾಲಿ ಇದೆ ಅಂತ ಹೇಳಬಹುದು ವ್ಯತ್ಯಾಸ ಇಷ್ಟೆ. ಈಗ ಮೊನ್ನೆ ನಾನು ಮಾಡಿಧಂತಹ ಅಪರಾಧ ಏನು ? ಹೆಡ್‌ಲೈನ್ ಓದಿದರು ಹೆಡ್ ಲೈನ್‌ನಲ್ಲಿ ಏನು ಬರುತ್ತದೆ ? ಕೆಳಗಡೆ ಬರತಕ್ಕಂತಹ ವಿವರಗಳೆಲ್ಲವೂ ಯಾವಾಗಲೂ ಸರಿಯಾಗಿ ಇರುತ್ತವೆಯೇ ? ಹೆಡ್ ಲೈನ್ ಅಷ್ಟೇ ಇರುವುದಿಲ್ಲ. ನಾನೇ ಅದನ್ನು ಓದಿಬಿಡುತ್ತೇನೆ. ಪತ್ರಿಕೆಯಲ್ಲಿಬರತಕ್ಕಂಥದ್ದು ನೂರಕ್ಕೆ ನೂರರಷ್ಟು ಸರಿಯಾಗಿಬರುತ್ತದೆ ಎಂಬುದು ಸರಿಯಲ್ಲ. ಸ್ವಲ್ಪ ವ್ಯತ್ಯಾಸವಾಗುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಅನುಕೂಲವಾಗತಕ್ಕ ರೀತಿಯಲ್ಲಿ ಪತ್ರಿಕೆಯಲ್ಲಿ ಬಂದಿರತಕ್ಕ ದ್ದನ್ನು ಟ್ವಿಸ್ಟ್ ಮಾಡಿ ಓದಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಟ್ವಿಸ್ಟ್ ಮಾಡಿ ಹಾಕಿದ್ದಾರೆ ಅಂತಲೂ ಹೇಳಿಲ್ಲ. ಹಾಕುವುದಿಲ್ಲ ಅಂತಲೂ ಹೇಳಿಲ್ಲ. ಬಹಳ ಪ್ರಚಲಿತವಾಗಿ ರಾಜಕೀಯ ದೃಷ್ಟಿಯಿಂದ ಎಕ್ಸ್‌ಪ್ಲೋಸೀವ್ ಆಗಿ ಆಗಿರತಕ್ಕಂತಹ ದೃಷ್ಟಿಯಿಂದ ಸ್ವಲ್ಪ ಮಟ್ಟಿಗೆ ಕಲರ್ ಬಂದರೆ ಆದಕ್ಕೆ ಯಾರನ್ನೂ ಬ್ಲೇಮ್ ಮಾಡಬೇಕಾದುದಿಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ, "AP can use surplus Krishna Water : CM Hegde" ಅಂತ ಇದೆ.

> "So far as Andhra Pradesh's right to use surplus water is concerned, the Bachawat Commission Award is very clear. We have no objection at all on that. For Andhra's use of surplus water if any water year, there is no objection since they have a right under the tribunal's award in which every State's share is precisely fixed."

ಅಲ್ಲಿ ಏನು ಮಾಡಿದ್ದೇನೆ ? ಆಮೇಲೆ ಕಾಂಟ್ರವರ್ಸಿಯ ಬಗ್ಗೆ ಅವರ ಎದುರಿಗೇ ಹೇಳಿದ್ದೇನೆ. ಬಚಾವತ್ ಆವಾರ್ಡಿನ ಬಗ್ಗೆ ನಮಗೂ ಅವರಿಗೂ ಕಾಂಟ್ರವರ್ಸಿ ಇಲ್ಲ ಎಂಬುದನ್ನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳನ್ನು ಪಕ್ಕದಲ್ಲಿಟ್ಟುಕೊಂಡೇ ಹೇಳಿದ್ದೇನೆ. That means he is committed to that. I said, we have no controversy so far as the implication and the meaning of the Bachawat Award is concerned. ತೆಲುಗು-ಗಂಗಾ ಯೋಜನೆಗೆ ಯಾವಾಗ ಒಪ್ಪಂದವಾಗಿದೆ ಅದಕ್ಕೆ ಒಪ್ಪುವುದಿಲ್ಲ ಅಂತ ಹೇಳುವುದಕ್ಕಾಗುತ್ತದೆಯೇ ? ತೆಲುಗು-ಗಂಗಾ ಯೋಜನೆಗೆ ೧೫ ಟಿ.ಎಂ.ಸಿ.ಎಫ್.ಟಿ. ನೀರನ್ನು ತೆಗೆದುಕೊಂಡು ಹೋಗುವ ಬಗ್ಗೆ ಯಾವ ರೂಪದಲ್ಲಿ ಡಿಸೈನ್ ಮಾಡಿದ್ದಾರೋ ಅದಕ್ಕೆ ಒಪ್ಪುವುದಕ್ಕೆ ಸಾಧ್ಯವಿಲ್ಲ ಅಂತ ಹೇಳುವುದಕ್ಕೆ ಬರುತ್ತದೆಯೇ ? ಆ ಬಗ್ಗೆ ಒಪ್ಪಂದವಾಗಿದೆ, ಅವರಲ್ಲಿ ಎಷ್ಟು ನೀರನ್ನು ತೆಗೆದುಕೊಂಡು ಹೋಗುತ್ತಾರೋ, ಯಾವ ನೀರನ್ನು ತೆಗೆದುಕೊಂಡು ಹೋಗುತ್ತಾರೋ ಅದು ಅಷ್ಟೂ ಅವರಿಗೆ ಸಂಬಂಧಪಟ್ಟದ್ದು ಆಗಿರುತ್ತದೆ. ಮೊನ್ನೆ ಕೂಡ ಅವರ ಪಕ್ಷದ ಕಾರ್ಯದರ್ಶಿಯೊಬ್ಬರು ನನಗೆ ಭೇಟಿಯಾಗಿದ್ದರು. ಅವರು ಸ್ಪಷ್ಟಪಡಿಸಿದರು ಎಂದೆಂದೂ ಬಚಾವತ್ ಕಮೀಷನ್ನಿನ ಅವಾರ್ಡಿಗೆ ಧಕ್ಕೆ ತರತಕ್ಕ ರೀತಿಯಲ್ಲಿ ಮಾಡುವುದಿಲ್ಲ ಅಂತ ಹೇಳಿದರು. ಅವರಿಗೆ ಇದೇ ರೀತಿ ಹೇಳಿಕೆ ಕೂಡ ಬೇಕು, ಪತ್ರಿಕೆಯಲ್ಲಿ ಇದೇ ರೀತಿಯ ಹೇಳಿಕೆ ಬರಬೇಕೆಂದು ಒತ್ತಾಯ ತರತಕ್ಕಂತದ್ದು ಸಾಧ್ಯವಿಲ್ಲ. ಇದಕ್ಕೆ ನಾನು ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಜೊತೆ ವೈಯಕ್ತಿಕವಾಗಿ ಸ್ನೇಹವನ್ನು ಮಾಡಿ ಅವರಿಂದ ಏನು ಪಡೆಯಲಿ ವೈಯಕ್ತಿಕ ಸ್ನೇಹ ಅಂತ ಹೇಳಿ ಳ ಕೋಟಿ ಜನರ ಹಿತವನ್ನು ಬಲಿಕೊಡುವ ಯಾವ ಸ್ವಾರ್ಥ ಇದೆ ಅವರಲ್ಲಿ ? ಕಾಲು ಕೆರೆದು ಜಗಳ ಆಡಕೂಡದು ಅಷ್ಟೆ. ಬಚಾವತ್ ಆಯೋಗದ ಅವಾರ್ಡ್ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ನಮ್ಮ ಹಿತವನ್ನು ಯಾರೂ ಕೂಡ ಕಸಿದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ದೇವೇಗೌಡರು ಕೊಟ್ಟಂತಹ ಹೇಳಿಕೆ ಅಥವಾ ಅದರ ಹಿಂದಿನ ಹೇಳಿಕೆ, ನನ್ನ ಹೇಳಿಕೆ, ಈ ಹೇಳಿಕೆಗಳಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಎಂಬುದಾಗಿ ಇಲ್ಲಿ ಸ್ಪಷ್ಟಪಡಿಸಬಯಸುತ್ತೇನೆ. ಇದಕ್ಕೆ ಮತ್ತೊಂದು ಏನೆಂದರೆ ಇದಕ್ಕೂ ಮೇಲ್ಪಟ್ಟು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದಕ್ಕೂ ಮಿಕ್ಕು ಇದರಲ್ಲಿ ಬಹಳ ವ್ಯತ್ಯಾಸ ಇದೆ ಅಂತ ತಮಗೆ ಅನ್ನಿಸಿದರೆ ಹಕ್ಕು ಚ್ಯುತಿ ಸಭೆಗೆ ಕಳುಹಿಸಿಕೊಡಿ. ಆದರೆ ಇದರ ಮೇಲೆ ಗಂಟೆಗಟ್ಟಲೆ ಚರ್ಚೆ ಮಾಡತಕ್ಕ ಅಗತ್ಯ ಇಲ್ಲ. ತಮಗೂ ಅಧಿಕಾರ ಇದೆ. ಈ ಮನೆಯಲ್ಲಿ ಕೊಟ್ಟಂತಹ ಹೇಳಿಕೆ, ಪತ್ರಿಕೆಯಲ್ಲಿ

ಬಂದಿರುವಂತಹ ಹೇಳಿಕೆ ಹಿಂದಿನ ರೆಕಾರ್ಡ್ ಇವೆಲ್ಲವನ್ನೂ ನೋಡಿ ಸದನದ ಹಕ್ಕು ಮೊಟಕು ಮಾಡತಕ್ಕ ಹೇಳಿಕೆ ಆಗಿದೆ ಎಂಬುದು ನಿಮ್ಮ ಮನಸ್ಸಿಗೆ ಅನ್ನಿಸಿದರೆ ದಯವಿಟ್ಟು ಪ್ರಿವಿಲೇಜ್ ಕಮಿಟಿಗೆ ರೆಫರ್ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ನಮ್ಮ ಉದ್ದೇಶ ಇಷ್ಟೆ. ನಮ್ಮ ರಾಜ್ಯಕ್ಕೆ ಇರತಕ್ಕ ಹಕ್ಕು ರಕ್ಷಣೆ ಯಾಗಬೇಕೆಂಬುದೇ ನಮ್ಮ ಸದುದ್ದೇಶ. ಜೊತೆಯಲ್ಲಿ ಈ ಸದನದಲ್ಲಿ ಕೊಟ್ಟಿರತಕ್ಕ ಹೇಳಿಕೆಗೆ ಮತ್ತೊಂದು ಅಭಿಪ್ರಾಯ ಹೊರಗಡೆ ಬಂದಾಗ ಅದು ನಮ್ಮ ಹಕ್ಕಿಗೆ ಧಕ್ಕೆ ಬರುತ್ತದೆ. ಜೊತೆಗೆ ಹಕ್ಕಿನ ಪ್ರಶ್ನೆ ಉದ್ಭವವಾಗುತ್ತದೆ ಎನ್ನತಕ್ಕಂತಹ ದೃಷ್ಟಿಯಿಂದ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ಸರ್‌ಪ್ಲಸ್ ವಾಟರ್ ಎನ್ನತಕ್ಕಂತಹ ವಿಚಾರವನ್ನು ಪದೇ ಪದೇ ಆಂಧ್ರ ಪ್ರದೇಶ್‌ದವರು ಎತ್ತುತ್ತಿದ್ದಾರೆ. ಅದರ ಮೇಲೆ ಏನು ಹೇಳಿದ್ದಾರೆಂದರೆ.....

ಶ್ರೀ ರಾಮಕೃಷ್ಣ ಹೆಗಡೆ.—In any water here ಎಂದು ಕೂಡ ಅದರಲ್ಲಿ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಅದು ನಿಜ. ನಮಗೆ ಬರತಕ್ಕಂತಹ ಪ್ರಶ್ನೆ ಯಾವಾಗ ೭೫ ಪರ್ಸೆಂಟ್ ಡಿಪೆಂಡಬಿಲಿಟಿ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಬೇಕು. ಸರ್‌ಪ್ಲಸ್ ವಾಟರ್‌ನ್ನು ನಿಗದಿ ಮಾಡಿದ ಮೇಲೆ ತೆಲುಗು-ಗಂಗಾ ನಿರ್ಮಾಣದ ಪ್ರಶ್ನೆ ಅದು ಒಂದು ರೀತಿ. ಡಿಪೆಂಡೆಬಲಿಟಿಯನ್ನು ನಿಗದಿ ಮಾಡತಕ್ಕಂತಹ ವಿಚಾರ ಈ ಶತಮಾನದ್ದಲ್ಲ. ಈ ಶತಮಾನ ಮುಗಿದ ಮೇಲೆ ಮತ್ತೊಂದು ಪಂಚಾಯಿತಿಯನ್ನು ಮಾಡಿ ಆ ಹಂತದಲ್ಲಿ ಅದು ಶೀರ್ಮಾನವಾಗತಕ್ಕಂತಹದ್ದು. ಅಲ್ಲಿಯವರೆಗೂ ನಮಗೆ ಇರತಕ್ಕಂತದ್ದು ನಮ್ಮ ಹೇರು ಏನಿದೆ ಅಂದರೆ ಬಚಾವತ್ ಅಯೋಗದ ಐತೀರ್ಪಿನ ಪ್ರಕಾರ ಅದಕ್ಕೆ ಧಕ್ಕೆ ಬರುತ್ತದೆ ಎನ್ನುವ ಅಭಿಪ್ರಾಯವನ್ನು ಇಟ್ಟು ನಾವು ಈ ಸದನದಲ್ಲಿ ಆ ಬಗ್ಗೆ ಚರ್ಚೆ ಮಾಡಿದ್ದೇವೆ. ಆದ್ದರಿಂದ ಸರ್‌ಪ್ಲಸ್ ವಾಟರ್‌ನ್ನು ಯಾರಾದರೂ ತೆಗೆದು ಕೊಂಡು ಹೋಗಬಹುದು, ಉಪಯೋಗಕ್ಕೆ ಇರತಕ್ಕಂತಹದ್ದು ಮೆರಿಟ್ ದೃಷ್ಟಿಯಿಂದ ನಮ್ಮ ಹಕ್ಕಿನ ಪ್ರಶ್ನೆ ಬರುತ್ತದೆ. ಮೆರಿಟ್ ದೃಷ್ಟಿಯಿಂದ ಆ ಪದವನ್ನು ಪ್ರಯೋಗ ಮಾಡುವುದು ಒಳ್ಳೆಯದೆಲ್ಲ ಎಂಬುದು ಸ್ಪಷ್ಟವಾದ ನಿಲುವು ನಮ್ಮದು. The moment we use that word 'surplus water' saying that Andhra Pradesh can make use of surplus Water for Telugu-Ganga Project, ಎನ್ನತಕ್ಕಂತಹದ್ದು ಮತ್ತೆ ನಮ್ಮ ಕುತ್ತಿಗೆಗೆ ಬರಬಹುದು ಎಂಬುದು ನಮ್ಮ ಸ್ಪಷ್ಟವಾದ ನಿಲುವು. ಆ ಅಭಿಪ್ರಾಯವನ್ನು ತಾವು ಒಪ್ಪುತ್ತೀರಿ ಎನ್ನುವ ಭಾವನೆಯಿಂದ ಮಾತನಾಡುತ್ತಿದ್ದೇನೆ. ಅದು ಯಾವಾಗ? ಎಷ್ಟು? ಎನ್ನುವಂತಹ ಸಾಕಷ್ಟು ಮರುಪ್ರಶ್ನೆ ಉದ್ಭವವಾಗುತ್ತವೆ. ಆದಕ್ಕೆ ಅವಕಾಶ ಬೇಡ ಎನ್ನುವ ದೃಷ್ಟಿಯಿಂದ ಮಾನ್ಯ ಶ್ರೀ ದೇವೇಗೌಡರು ಈ ವಿಚಾರದಲ್ಲಿ ಸರ್ಕಾರದ ಪರವಾಗಿ ಏನೊಂದು ಹೇಳಿಕೆಯನ್ನು ಕೊಟ್ಟರು ಆದನ್ನು ತಾವೂ ಕೂಡ ಎಂಡಾರ್ಸ್ ಮಾಡಿದಿರಿ. ಆ ದೃಷ್ಟಿಯಿಂದ ಆ ರೀತಿಯ ಪದ ಪ್ರಯೋಗವನ್ನು ನಾವಾಗಿಯೇ ಉಪಯೋಗ ಮಾಡಿದರೆ ಅದು ಆಂಧ್ರಕ್ಕೆ ಹ್ಯಾಂಡ್ ಕೊಟ್ಟಹಾಗೆ ಆಗುತ್ತದೆ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆ ಪದವನ್ನು ಪದೇ ಪದೇ ಹೇಳಿರುವುದರಿಂದ ಸರ್‌ಪ್ಲಸ್ ವಾಟರ್‌ನ್ನು ಉಪಯೋಗ ಮಾಡಬಹುದು ಎನ್ನತಕ್ಕಂತಹ ಮಾತನ್ನು ನಾವೇ ಹೇಳತಕ್ಕಂತಹದ್ದು ಒಳ್ಳೆಯದ್ದು. ಆ ಒಂದು ಅಭಿಪ್ರಾಯವನ್ನು ನೋಡಿದಾಗ ಮೊದಲನೇ ಪ್ಯಾರಾದಲ್ಲಿ ಇದೆ. ಆಂಧ್ರ ಪ್ರದೇಶ್ ಕೆನ್ ಯೂಸ್ ಸರ್‌ಪ್ಲಸ್ ವಾಟರ್ ಜಸ್ಟ್ ಓದಿ ಅಂತ ಹೇಳುತ್ತಿದ್ದೆನೆ.

ಶ್ರೀ ರಾಮಕೃಷ್ಣ ಹೆಗಡೆ.—ಜಸ್ಟ್ ಆಲ್ಲ. ಟೆಕ್ಸ್ಟ್.

ಶ್ರೀ ಎಸ್. ಬಂಗಾರಪ್ಪ.— ಈಕ್ವೆಶ್ಚನ್ ಕೂಡ ಅವರು ಕವರ್ ಮಾಡಿದ್ದಾರೆ.

"Karnataka has no objection whatsoever to Andhra Pradesh utilising the surplus waters in the Krishna, Karnataka Chief Minister Ramakrishna Hegde declared her on Thursday giving a new twist to the controversy raging between the two States on Telugu Ganga Project."

ಸರ್‌ಪ್ಲಸ್ ವಾಟರ್ ಎಂಬ ಪದ ಪ್ರಯೋಗ ಮಾಡಿದ್ದೀರಿ. ಅಂದರೆ ಸರ್‌ಪ್ಲಸ್ ವಾಟರ್ ಯಾವಾಗ? ಎಷ್ಟು? ಎಂಬ ಹಲವಾರು ಪ್ರಶ್ನೆಗಳು ಆದರಿಂದ ಉದ್ಭವವಾಗುತ್ತವೆ. ಇದನ್ನು ತಾವು ಬಗೆಹರಿಸಬೇಕಾಗುತ್ತದೆ. ಸದನದಲ್ಲೇ ಚರ್ಚೆ ಮಾಡಿದ್ದೇವೆ. ಸರ್‌ಪ್ಲಸ್ ವಾಟರ್ ಬಗ್ಗೆ

ಸ್ಪಷ್ಟವಾದ ನಿಲುವನ್ನು ಸರ್ಕಾರ ತೆಗೆದುಕೊಂಡಿದೆ ಎಂಬುದಾಗಿ ಶ್ರೀಮಾನ್ ದೇವೇಗೌಡರು ಸರ್ಕಾರದ ಪರವಾಗಿ ಹೇಳಿಕೆಯನ್ನು ಕೊಟ್ಟರು, ಅದಕ್ಕಾಗಿ ಆ ಹೇಳಿಕೆಯನ್ನು ನಾವು ಸ್ವಾಗತ ಮಾಡಿದ್ದೇವೆ. ಆದರೆ ತೆಲಗು ಗಂಗಾ ಪ್ರಾಜೆಕ್ಟ್‌ನ್ನು ಅವರು ನಿರ್ಮಾಣ ಮಾಡಿಕೊಂಡು ಹೋಗುತ್ತಿದ್ದಾರೆ. ಇದರ ಮುಂದೆ ನಾವು ಸರ್‌ಪ್ಲಸ್ ವಾಟರ್ ಎಂಬ ಪದ ಪ್ರಯೋಗವನ್ನು ನಾವೇ ಮಾಡುವುದಾದರೆ ಅದರಿಂದ ಅವರಿಗೆ ಇನ್ನೂ ಹೆಚ್ಚು ಉತ್ತೇಜನ ಸಿಕ್ಕಂತೆ ಆಗುತ್ತದೆ. The Irrigation minister said, "We will use all possible ways and force to stop it." We were fully satisfied wihh it that day. But the Statement made by the Hon. Chief Minister at Hyderabad and Delhi to go against the very letter and spirit of the Statement made by the Hon. Minister for Irrigation Sri. Deve Gowda here. That is why that curtails the privileges of the Members and also the entire House itself. ಅದಕ್ಕೋಸ್ಕರ ಹಕ್ಕು ಚ್ಯುತಿ ನಿರ್ಣಯದ ಮುಖಾಂತರ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇವೆಯೇ ವಿನಃ ಬೇರೆ ಯಾವ ಉದ್ದೇಶದಿಂದಲ್ಲ. ಇದರ ವಿವರಗಳಿಗೆ ಹೋಗಬೇಕಾಗುತ್ತದೆ. ಹಕ್ಕುಭಾದ್ಯತಾ ಸಮಿತಿಗೆ ಹೋಗಲಿ ಎನ್ನುವ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳೂ ಕೂಡ ಕೊಟ್ಟಿದ್ದಾರೆ.

ಅಧ್ಯಕ್ಷರು.—ಅವರು ಹೇಳುತ್ತಾರೆ. ನಾನು ತೀರ್ಮಾನ ಮಾಡಬೇಕಲ್ಲ. ಇನ್ನೊಮ್ಮೆ ಅವರಿಗೂ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅದು ನಿಜ. ತೀರ್ಮಾನ ಕೊಡುವವರು ತಾವು.

ಶ್ರೀ ಎಸ್. ಬಂಗಾರಪ್ಪ.—ಈಗ ನಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೇವೆ. ಅವರ ಅಭಿಪ್ರಾಯವನ್ನೂ ವ್ಯಕ್ತ ಮಾಡಿದ್ದಾರೆ, ಇದು ಹಕ್ಕುಭಾಧ್ಯತಾ ಸಮಿತಿಗೆ ಹೋದರೆ ನಮ್ಮ ದೇನೂ ಆಕ್ಷೇಪಣೆ ಇಲ್ಲವೆಂಬ ಅಭಿಪ್ರಾಯ ಕೂಡ ಬಂದಿದೆ.

ಅಧ್ಯಕ್ಷರು.— " Caeser's wife must be above suspicion' ಅಂದಹಾಗೆ ಹೇಳಿದ್ದೀರಿ. ಅದಕ್ಕೆ ನಾನು ಒಪ್ಪಿಗೆ ಕೊಡಬೇಕಲ್ಲ. ಹಕ್ಕುಭಾಧ್ಯತಾ ಸೂಚನೆಯನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ ಬೇಕಾಗುತ್ತದೆ.

SRI S. BANGARAPPA.—The hon. Chief Minister has rightly said, as I am saying, that he has no objection if this matter is referred to the privilage Committee. I think that has made it very easy for you to reffer it to the privilage Committee. ಇದರಿಂದ ತಮಗೆ ಕೂಡ ಬಹಳ ಬುಲಭವಾಗಿದೆ. ಇದರ ಬಗ್ಗೆ ತಾವು ತೀರ್ಮಾನ ಕೊಟ್ಟು ಇದನ್ನು ಹಕ್ಕು ಭಾಧ್ಯತಾ ಸಮಿತಿಗೆ ಕಳುಹಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವಿಚಾರ ಮುಖ್ಯ ಮಂತ್ರಿಗಳಿಗೆ ಸ್ಪಷ್ಟೀಕರಣ ಕೊಡುವುದಕ್ಕೆ ಬಹಳ ಸುಲಭವಾಗಿದೆ. ಆದರೆ ಏಕೋ ಏನೋ ಸುತ್ತಿ ಬಳಸಿ ಈ ವಿಚಾರವನ್ನು ಇಡುತ್ತಿದ್ದಾರೆ. Suppose you feel that you can't disclose some of these things, you can coll us and take us into confidence ಅದನ್ನಾದರೂ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ.—ವಿರೋಧ ಪಕ್ಷದ ಮುಖಂಡರಲ್ಲಿ ವಿನಂತಿ ಏನೆಂದರೆ, ಈ ಸಭೆಯಕಾಲ ಹಾಳಾಗುವುದು ಬೇಡ. ನೀರಿನ ವಿವಾದದಲ್ಲಿ ಕರ್ನಾಟಕಕ್ಕೆ ಅಪಾಯವಾಗದಂತೆ ನೋಡಿಕೊಳ್ಳುತ್ತೆ ವೆಂದು ಹೇಳಿದರೂ. ಹಕ್ಕುಬಾಧ್ಯತಾ ಸಮಿತಿ ಇದೆಯಲ್ಲಾ, ಆದರ ಮುಂದೆ ಈ ವಿಚಾರ ಹೋಗಲಿ ಎಂದು ಹೇಳುತ್ತಿದ್ದೀರಿ. ನಮ್ಮ ಹಕ್ಕಿನಲ್ಲಿ ಒಂದು ತೊಟ್ಟು ನೀರನ್ನೂ ಅಂಧ್ರಕ್ಕೆ ಬಿಟ್ಟು ಕೊಡುವುದಿಲ್ಲವೆಂದು ಸಾಮಾನ್ಯ ಚರ್ಚೆಗೆ ಉತ್ತರ ಕೊಡುವ ಕಾಲದಲ್ಲಿ ಹೇಳಿದ್ದೇವೆ. ಆದರೂ ಈ ವಿಚಾರದಲ್ಲಿ ಗೊಂದಲ ಇದೆ. ಒಬ್ಬೊಬ್ಬರು ಒಂದೊಂದು ರೀತಿಯ ವಾಖ್ಯಾನ ಮಾಡತಕ್ಕದ್ದು ಅಲ್ಲದೆ ಪತ್ರಿಕೆಯಲ್ಲಿ ಬಂದಿರತಕ್ಕ ವಿಷಯದ ಬಗ್ಗೆ ಕೂಡ ಗೊಂದಲ ಇದೆ. ಈ ಬಗ್ಗೆ ನಾಳೆ ಮಧ್ಯಾಹ್ನ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆದು ಚರ್ಚೆ ಮಾಡೋಣ. ಮುಖ್ಯ ಮಂತ್ರಿಗಳನ್ನು ವಿನಂತಿಸಿಕೊಂಡದಕ್ಕೆ ಅವರು ಒಪ್ಪಿದ್ದಾರೆ. ಆದ್ದರಿಂದ, ಇದರ ಬಗ್ಗೆ ಮತ್ತೆ ಚರ್ಚೆಯನ್ನು ಮುಂದು

ಪರಿಸುವುದು ಬೇಡ. ಇದು ತುಂಬಾ ಸೂಕ್ಷ್ಮವಾದ ವಿಚಾರ. ನಾವು ನೀವೆಲ್ಲ ಕೂಡಿ ನಿರ್ಣಯ ಮಾಡಿದಂತಹ ಹೇಳಿಕೆಯನ್ನು ಸರ್ಕಾರದ ಪತಿಯಿಂದ ಬಿಡುಗಡೆ ಮಾಡುತ್ತೇವೆ.

ಶ್ರೀ ಎಂ. ವೀರಪ್ಪಮೊಯಿಲಿ.—ನೀರಾವರಿ ಸಚಿವರು ಕೂಡತಕ್ಕ ಹೇಳಿಕೆ ಬಹಳ ಸೂಕ್ತವಾಗಿದೆ. ಅದನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಮುಖ್ಯ ಮಂತ್ರಿಯವರ ಹೇಳಿಕೆ ಮೇಲೆ ವಾಖ್ಯಾನ ಮಾಡತಕ್ಕದ್ದಾಗಲಿ ಅಥವಾ ಬೇರೆ ಕರೆಸ್ಪಾಂಡೆನ್ಸ್ ಮೇಲೆ ವ್ಯಾಖ್ಯಾನ ಮಾಡತಕ್ಕ ಪರಿಸ್ಥಿತಿ ಆಗಲಿ ಬರಬಾರದು. ನಮ್ಮ ಧೋರಣೆ ಸ್ಪಷ್ಟವಾಗಿರಬೇಕು. ಇದರಲ್ಲಿ ಸೂಕ್ಷ್ಮವಾದ ವಿಚಾರ ಅಡಗಿದೆ ಎಂದು ಹೇಳಿದರೆ ಅದಕ್ಕೆ ನಮ್ಮ ಅಡ್ಡಿಯಿಲ್ಲ. ನಮ್ಮನ್ನೂ ಕರೆಸಿ ಚರ್ಚೆ ಮಾಡಿ.

ಶ್ರೀ ರಾಮಕೃಷ್ಣ ಹೆಗಡೆ.—ಆಗಬಹುದು.

ಶ್ರೀ ಹೆಚ್ ಡಿ. ದೇವೇಗೌಡ.—ನಿಮ್ಮಗಳ ಅಭಿಪ್ರಾಯವನ್ನು ತೆಗೆದುಕೊಂಡು ಒಟ್ಟಿಗೆ ಹೇಳಿಕೆಯನ್ನು ತಯಾರಿಸಿ ಕಳುಹಿಸುತ್ತೇವೆಂಬ ಭರವಸೆ ನೀಡಬಯಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ನಾಳೆ ಇದರ ಬಗ್ಗೆ ಚರ್ಚೆ ಮಾಡಿ ಆಮೇಲೆ ಒಂದು ಹೇಳಿಕೆಯನ್ನು ಕೊಡತಕ್ಕ ವಿಚಾರ ಮಾಡಿದರೆ ಒಳ್ಳೆಯದು.

ಶ್ರೀ ಎಸ್. ಬಂಗಾರಪ್ಪ.—ವಿವರಗಳಿಗೆ ಹೋಗಬಾರದೆಂಬುದು ನನ್ನ ಅಭಿಪ್ರಾಯ. ಒಂದೇ ಒಂದು ಸಲಹೆ ಏನೆಂದರೆ ಇಲ್ಲಿ ಸಭೆ ನಡೆಯುತ್ತಿರಬೇಕಾದರೆ ಅಧಿಕಾರದಲ್ಲಿ ಯಾರೇ ಇರಲಿ ಅವರು ಹೇಳಿಕೆಯನ್ನು ಟ್ವಿಸ್ಟ್ ಮಾಡುವುದಕ್ಕೆ ಅಥವಾ ಅದಕ್ಕೆ ಕಲರ್ ಕೊಡುವುದಕ್ಕೆ ಹೋದರೆ ಕಷ್ಟ ವಾಗುತ್ತದೆ. ಆ ರೀತಿ ಹೇಳಿಕೆ ಕೊಡುವುದನ್ನು ನಿಲ್ಲಿಸಿದರೆ ಒಳ್ಳೆಯದು.

ಅಧ್ಯಕ್ಷರು.—ನೀವು ನಿಮ್ಮ ಹಕ್ಕು ಬಾಧ್ಯತಾ ಸೂಚನೆಯನ್ನು ಹೊರಗೆ ತೆಗೆದುಕೊಳ್ಳಿ, ಅದು ಒಂದು ಒಳ್ಳೆಯ ಆರೋಗ್ಯರ ಸಂಪ್ರದಾಯವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅಭಿಪ್ರಾಯವನ್ನು ಒಪ್ಪುತ್ತೇನೆ. ಈ ವಿಚಾರದ ಬಗ್ಗೆ ಚರ್ಚೆ ಆಗುವುದಕ್ಕೆ ಅವಕಾಶ ಆಗಬಾರದೆಂಬ ದೃಷ್ಟಿಯಿಂದ ನಾವು ಇದನ್ನು ಪ್ರೆಸ್ ಮಾಡುವುದಿಲ್ಲ ಈಗ ದೇವೇಗೌಡರು ಹೇಳಿದ್ದಾರೆ ಮತ್ತು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಲದೆ ನಾಳೆ ಸಭೆ ಇರುವುದರಿಂದ ಮತ್ತು ರಾಜ್ಯದ ಹಿತದೃಷ್ಟಿಯಿಂದ ಈ ವಿಷಯ ಚರ್ಚೆಗೆ ಬಾರದಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಳ್ಳಬೇಕೆಂಬ ದೃಷ್ಟಿಯಿಂದ ನಾವು ಇದನ್ನು ಒತ್ತಾಯ ಮಾಡುವುದಿಲ್ಲ.

ಅಧ್ಯಕ್ಷರು.—ನಾನು ಎರಡೂ ಕಡೆಯ ವಾದವನ್ನೂ ಕೇಳಿದ್ದೇನೆ. ಹಕ್ಕುಬಾಧ್ಯತಾ ಸೂಚನೆಗೆ ಅನುಮತಿಯನ್ನು ನಿರಾಕರಿಸಿದ್ದೇನೆ.

ಗಮನ ಸೆಳೆಯುವ ಸೂಚನೆ

ಶ್ರೀ ಕುರಾ (ಸೂಳ್ಯ).—ದಕ್ಷಿಣ ಕನ್ನಡ ಜಿಲ್ಲೆಯ ಸೂಳ್ಯದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರುಗಳಿಲ್ಲದಿರುವುದರಿಂದ ಸೂಳ್ಯ ತಾಲ್ಲೂಕಿನ ಜನರಿಗೆ ಆಗಿರುವ ತೊಂದರೆಯ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಡಾ॥ ಹೆಚ್. ಎಲ್. ತಿಮ್ಮೇಗೌಡ(ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಖಾತೆ ಸಚಿವರು).—ಮಾನ್ಯ ಅಧ್ಯಕ್ಷರೆ, ನಾನು ಈ ಹೇಳಿಕೆಯನ್ನು ನೀಡ ಬಯಸುತ್ತೇನೆ.
ಸೂಳ್ಯ ತಾಲ್ಲೂಕಿನಲ್ಲಿ ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕಗಳಲ್ಲಿ ವೈದ್ಯರ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿವೆ.

೧) ಪ್ರಾಥಮಿಕ ಆರೋಗ್ಯ ಕೇಂದ್ರ, ಸೂಳ್ಯ.—ಈ ಆಸ್ಪತ್ರೆಯಲ್ಲಿ ಮೂರು ವೈದ್ಯರುಗಳ ಹುದ್ದೆಯು ಮಂಜೂರಾಗಿವೆ. ಹಾಲಿ ಈಗ ಒಬ್ಬರು ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅವುಗಳಲ್ಲಿ ಒಂದು ಹುದ್ದೆಯು(ಸಿಹೆಚ್‌ವಿ)ಖಾಲಿ. ಇದೆ. ಒಬ್ಬ ಮಹಿಳಾ ವೈದ್ಯಾಧಿಕಾರಿಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಹೆಬ್ಬರಿಯಿಂದ ತಾರೀಖು ೩೧-೭-೧೯೮೫ ರಂದು ವರ್ಗಮಾಡಲಾಗಿದೆ.

೨) ಪೋಲಿಯೋ ಟ್ರೈಬಲ್ ಹೆಲ್ತ್ ಯೂನಿಟ್ ಸೂಳ್ಯ.—ಒಬ್ಬ ವೈದ್ಯರ ಹುದ್ದೆ ಮಂಜೂರಾಗಿದ್ದು, ಒಬ್ಬರು ಕಾರ್ಯ ನಿರ್ವಹಿಸುತ್ತಿದ್ದಾರೆ.